## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 407

ಮಾನ್ಯ ಸದಸ್ಯರ ಹೆಸರು : ಶ್ರೀ. ಎಂ.ಜಿ.ಮುಳೆ (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 10.03.2025.

ಉತ್ತರಿಸಬೇಕಾದ ಸಚಿವರು : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿರುವ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರು ಮತ್ತು ಆರೋಗ್ಯ ಸಿಬ್ಬಂದಿಯ ನಿರ್ಲಕ್ಷದಿಂದ ಅನಾಹುತಗಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ |
| ಆ | ಅನೇಕ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರು ಮತ್ತು ವೈದ್ಯಕೀಯ ಸಿಬ್ಬಂದಿಗಳು ಸರಿಯಾಗಿ ಚಿಕಿತ್ಸೆ ನೀಡದೆ ಪ್ರಾಣಪಾಯವಾಗುತ್ತಿದ್ದು ಜನರು ಈ ಬಗ್ಗೆ ಪ್ರತಿಭಟನೆ, ಗಲಾಟೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; | ಬಂದಿದೆ |
| ಇ | ಕಳೆದ ಎರಡು ವರ್ಷಗಳಲ್ಲಿ ಎಷ್ಟು ಕಡೆಗಳಲ್ಲಿ ಈ ರೀತಿ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ; ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳಾವುವು; | ಕಳೆದ ಎರಡು ವರ್ಷಗಳಲ್ಲಿ 14 ಕಡೆಗಳಲ್ಲಿ ರೋಗಿಗಳಿಗೆ ತೊಂದರೆ ಆಗಿರುವುದು ಗಮನಕ್ಕೆ ಬಂದಿರುತ್ತದೆ. |
| ಈ | ಕರ್ತವ್ಯದಲ್ಲಿ ನಿರ್ಲಕ್ಷ್ಯ ವಹಿಸಿ ಅಪಾಯ ಉಂಟು ಮಾಡಿರುವ ಎಷ್ಟು ಜನ ವೈದ್ಯರು ಮತ್ತು ವೈದ್ಯಕೀಯ ಸಿಬ್ಬಂದಿ ಮೇಲೆ ಸರ್ಕಾರ ಶಿಸ್ತಿನ ಕ್ರಮಕೈಗೊಳ್ಳಲಾಗಿದೆ? (ವಿವರಿಸುವುದು) | ಕರ್ತವ್ಯದಲ್ಲಿ ನಿರ್ಲಕ್ಷ್ಯ ವಹಿಸಿ ಅಪಾಯ ಉಂಟು ಮಾಡಿರುವ 10 ಜನ ವೈದ್ಯರು ಹಾಗೂ 04 ಶುಶ್ರೂಷಾಧಿಕಾರಿಗಳ ವಿರುದ್ಧ ಶಿಸ್ತು ಕ್ರಮಕೈಗೊಳ್ಳಲಾಗುತ್ತಿದ್ದು, ವಿವರವನ್ನು **ಅನುಬಂಧ-1**ರಲ್ಲಿ ನೀಡಲಾಗಿದೆ. |

**HFW 14 HSD 2025**

**( ದಿನೇಶ್ ಗುಂಡೂರಾವ್ )**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

## ಅನುಬಂಧ-1

| ಕ್ರ. ಸಂ | ವೈದ್ಯರ ಹೆಸರು / ಸ್ಥಳ | ವಿಷಯ | ಕೈಗೊಂಡಿರುವ ಕ್ರಮ |
|---|---|---|---|
| 1 | ಡಾ.ರತ್ನಪ್ರಭಾ, ವೈದ್ಯಾಧಿಕಾರಿಗಳು, ಪ್ರಾ.ಆ.ಕೇಂದ್ರ ಹೆಸರುಘಟ್ಟ, ಬೆಂಗಳೂರು ನಗರ ಜಿಲ್ಲೆ | ವೃದ್ಧ ಮಹಿಳೆಯರಿಗೆ ಸೂಕ್ತ ಚಿಕಿತ್ಸೆ ನೀಡದೇ ಸಾವನ್ನಪ್ಪಿರುವುದಾಗಿ ಸಾರ್ವಜನಿಕರಿಂದ ಗಲಭೆ | ತನಿಖಾ ವರದಿಯನ್ವಯ ವೈದ್ಯರಿಗೆ ಕ.ನಾ.ಸೇ(ಸಿ.ಸಿ.ಎ)ನಿಯಮ 11 ರಡಿಯಲ್ಲಿ ದೋ.ಪಟ್ಟಿ ಜಾರಿಗೊಳಿಸಲಾಗಿದೆ. |
| 2 | ಡಾ\|\|ನಮ್ರುತಾ ಅರವಳಿಕೆ ತಜ್ಞರು ಶ್ರೀಮತಿ ಮಾರಕ್ಕ ಹಾಗೂ ಶ್ರೀಮತಿ ನಾಗರತ್ನಮ್ಮ- ಶುಶ್ರೂಷಕ ಅಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ, ಪಾವಗಡ, ತುಮಕೂರು ಜಿಲ್ಲೆ | ಕರ್ತವ್ಯ ನಿರ್ಲಕ್ಷ್ಯತೆಯಿಂದ ಬಾಣಂತಿ ಮಹಿಳೆಯರು ಸಾವನ್ನಪ್ಪಿರುವ ಬಗ್ಗೆ | ವೈದ್ಯರು ಹಾಗೂ ಸಿಬ್ಬಂದಿಗಳನ್ನು ಕರ್ತವ್ಯಲೋಪ ಆರೋಪಕ್ಕೆ ಅಮಾನತ್ತುಗೊಳಿಸಲಾದ್ದು, ಈ ಪ್ರಕರಣವು ಜಂಟಿ ಪ್ರಕರಣವಾದ್ದರಿಂದ ಸರ್ಕಾರದ ಹಂತದಲ್ಲಿ ಕೆಸಿಎಸ್ (ಸಿಸಿಎ) ನಿಯಮ 11ರಡಿ ದೋಷಾರೋಪಣಾ ಪಟ್ಟಿಜಾರಿಗೊಳಿಸಲಾಗಿರುತ್ತದೆ. |
| 3 | ಡಾ\|\|ಉಷಾ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರು ಶ್ರೀಮತಿ ಯಶೋಧ ಮತ್ತು ಶ್ರೀಮತಿ ಸವಿತಾ.ಪಿ- ಶುಶ್ರೂಷಕಿ ಅಧಿಕಾರಿ-ಗಳು, ಜಿಲ್ಲಾ ಆಸ್ಪತ್ರೆ, ತುಮಕೂರು | ಗರ್ಭಿಣಿ ಹಾಗೂ ಅವಳಿ ಮಕ್ಕಳು ಸಾವನ್ನಪ್ಪಿರುವ ಬಗ್ಗೆ | ಸದರಿ ವೈದ್ಯರು ಹಾಗೂ ಸಿಬ್ಬಂದಿಗಳನ್ನು ಅಮಾನತ್ತುಗೊಳಿಸಲಾಗಿತ್ತು ನಂತರ ವಿಖಂಡನೆಗೊಳಿಸಿ ಸ್ಥಳ ನಿಯುಕ್ತಿಗೊಳಿಸಲಾಗಿರುತ್ತದೆ. ಕೆಸಿಎಸ್ (ಸಿಸಿಎ) ನಿಯಮ 1957 ರ ನಿಯಮದಡಿಯಲ್ಲಿ ಇಲಾಖಾ ವಿಚಾರಣೆಗೆ ಆದೇಶಿಸಿದೆ. |
| 4 | ಡಾ.ಹೇಮಾವತಿ, ಸ್ತ್ರೀರೋಗ ತಜ್ಞರು, ಮಧುಗಿರಿ ಸಾರ್ವಜನಿಕ ಆಸ್ಪತ್ರೆ, | ಚಿಕಿತ್ಸೆ ನೀಡುವಲ್ಲಿ ನಿರ್ಲಕ್ಷ್ಯತೆ | ಸಿಬಿಎ ರವರ ತನಿಖಾ ವರದಿಯನ್ವಯ ಕಾರಣ ಕೇಳುವ ಸೂಚನಾ ಪತ್ರ ಜಾರಿಗೊಳಿಸಲಾಗಿದೆ. |
| 5 | ಡಾ\|\|ಪೂಜಾ ಪಾಟೀಲ ಹಾಗೂ ಡಾ\|\|ಚಂದ್ರುಶೇಖರ ಜಿಲ್ಲಾಆಸ್ಪತ್ರೆ, ಕಲಬುರಗಿ | ಸೂಕ್ತ ಸಮಯದಲ್ಲಿ ಚಿಕಿತ್ಸೆ ದೊರಕದೇ ರೋಗಿ ಸಾವನ್ನಪ್ಪಿರುವ ಬಗ್ಗೆ | ಕರ್ತವ್ಯ ಲೋಪದ ಆರೋಪದ ಮೇರೆಗೆ ಸರ್ಕಾರದ ಹಂತದಲ್ಲಿ ದಿ.27.02.2025ರಂದು ಅಮಾನತ್ತುಗೊಳಿಸಿ ಆದೇಶಿಸಲಾಗಿರುತ್ತದೆ. |
| 6 | ಡಾ\|\| ಲಕ್ಷ್ಮಣ ಆರ್. ಪಿ. ಆಡಳಿತ ವೈದ್ಯಾಧಿಕಾರಿಗಳು ಪ್ರಾ.ಆ. ಕೇಂದ್ರ, ಹುನಗೇರಾ, ಯಾದಗಿರಿ ಜಿಲ್ಲೆ | ಗರ್ಭಿಣಿ ಮಹಿಳೆಗೆ ಚಿಕಿತ್ಸೆ ನೀಡುವಲ್ಲಿ ಕರ್ತವ್ಯ ನಿರ್ಲಕ್ಷ್ಯತೆ | ವೈದ್ಯರ ವಿರುದ್ಧ ಆರೋಪಕ್ಕೆ ಸಂಬಂಧಿಸಿದಂತೆ ಶಿಸ್ತುಕ್ರಮದ ಕಡತ ಚಾಲನೆಯಲ್ಲಿದೆ. |
| 7 | ಡಾ\|\| ಪರಶುರಾಮ ಯಣಗನ್ನವರ, ವೈದ್ಯಾಧಿಕಾರಿಗಳು, ಪ್ರಾ.ಆ.ಕೇಂದ್ರ ಸುಳೇಬಾವಿ, ಬೆಳಗಾವಿ ಜಿಲ್ಲೆ | ರೋಗಿಗಳಿಗೆ ಚಿಕಿತ್ಸೆ ನೀಡುವಲ್ಲಿ ಕರ್ತವ್ಯ ನಿರ್ಲಕ್ಷ್ಯತೆ | ವೈದ್ಯರ ವಿರುದ್ಧ ಆರೋಪಕ್ಕೆ ಸಂಬಂಧಿಸಿದಂತೆ ಸಿಸಿಎ ನಿಯಮ 11 ರಡಿ ದೋಷಾರೋಪಣಾ ಪಟ್ಟಿ ಜಾರಿಗೊಳಿಸಲು ಕಡತ ಚಾಲನೆಯಲ್ಲಿದೆ. |
| 8 | ಡಾ\|\| ವೀಣಾ ಇಟ್ನಾಳಮಠ, ಸ್ತ್ರೀರೋಗ ತಜ್ಞರು, ಸಮುದಾಯ ಆರೋಗ್ಯ ಕೇಂದ್ರ, ಸವದತ್ತಿ, ಬೆಳಗಾವಿ ಜಿಲ್ಲೆ | LSCS ಶಸ್ತ್ರಚಿಕಿತ್ಸೆ ಮಾಡಿದ ನಂತರ ಕರ್ತವ್ಯ ನಿರ್ಲಕ್ಷ್ಯದಿಂದ ಬಾಣಂತಿ ಮೃತಪಟ್ಟಿರುವ ಬಗ್ಗೆ | ವೈದ್ಯರ ವಿರುದ್ಧ ಆರೋಪಕ್ಕೆ ಸಂಬಂಧಿಸಿದಂತೆ ಸಿಸಿಎ ನಿಯಮ 11 ರಡಿ ದೋಷಾರೋಪಣಾ ಪಟ್ಟಿ ಜಾರಿಗೊಳಿಸಲಾಗಿದೆ. |
| 9 | ಡಾ\|\| ಪರಿಮಳ ದೇಸಾಯಿ, ಸ್ತ್ರೀರೋಗ ತಜ್ಞರು, ಸಮುದಾಯ ಆರೋಗ್ಯ ಕೇಂದ್ರ, ಮೋಕ, ಬಳ್ಳಾರಿ ಜಿಲ್ಲೆ | ಕರ್ತವ್ಯ ನಿರ್ಲಕ್ಷ್ಯದಿಂದ ಬಾಣಂತಿ ಮೃತಪಟ್ಟಿರುವ ಬಗ್ಗೆ | ವೈದ್ಯರ ವಿರುದ್ಧ ಆರೋಪಕ್ಕೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆಗೆ ವಿಚಾರಣಾಧಿಕಾರಿಗಳನ್ನು ನೇಮಕ ಮಾಡಲಾಗಿದೆ. |
| 10 | ಡಾ\|\| ನಿಸಾರ್ ಫಾತಿಮಾ ಆರ್. ಹಿಂದಿನ ಆಡಳಿತ ವೈದ್ಯಾಧಿಕಾರಿಗಳು ಪ್ರಾ.ಆ.ಕೇಂದ್ರ, ಪಾಳ್ಯ, ಆಲೂರು ತಾಲ್ಲೂಕು ಹಾಸನ ಜಿಲ್ಲೆ (ಪ್ರಸ್ತುತ ತಾಲ್ಲೂಕು ಆರೋಗ್ಯಾಧಿಕಾರಿ, ಆಲೂರು) | ಕರ್ತವ್ಯ ನಿರ್ಲಕ್ಷ್ಯದಿಂದ ಮಗು ಮೃತಪಟ್ಟಿರುವ ಬಗ್ಗೆ | ತನಿಖಾ ವರದಿಯನ್ವಯ ಕ್ರಮ ಕೈಗೊಳ್ಳಲಾಗುತ್ತಿದೆ. |

ಕರ್ನಾಟಕ ಸರ್ಕಾರ

# ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಆರೋಗ್ಯಸೌಧ, ಬೆಂಗಳೂರು

## ಡಿಪಿಎನ್ ವಿಭಾಗ

**ಅನುಬಂಧ-1**

| ಕ್ರಮ ಸಂಖ್ಯೆ | ವಿಷಯ | ಹಗರಣ | ಪ್ರಸ್ತುತ ಹಂತ |
|---|---|---|---|
| 1 | ಶ್ರೀಮತಿ.ಜ್ಯೋತಿ ಕಿತ್ತೂರು, ಶುಶ್ರೂಷಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ, ಅಡೂರು ಹಾನಗಲ್ ತಾಲ್ಲೂಕು ಹಾವೇರಿ ಜಿಲ್ಲೆ | ಮಗು ಚಿಕಿತ್ಸೆಗಾಗಿ ಬಂದಾಗ ಸೂಕ್ತ ಚಿಕಿತ್ಸೆ ನೀಡದೇ ಪೆವಿಕ್ವಿಕ್ ಅಂಟಿಸಿ ಕರ್ತವ್ಯನಿರ್ಲಕ್ಷ್ಯತೆ/ಕರ್ತವ್ಯಲೋಪದ ಆರೋಪ | ದಿನಾಂಕ:07.02.2025 ರ ಆದೇಶದಲ್ಲಿ ಸದರಿ ನೌಕರರನ್ನು ಸರ್ಕಾರಿ ಸೇವೆಯಿಂದ ಅಮಾನತ್ತುಗೊಳಿಸಲಾಗಿರುತ್ತದೆ. |
| 2 | ಶ್ರೀಮತಿ.ಮಹಾಲಕ್ಷ್ಮಿ, ಕಲ್ಲಪ್ಪ ಉರುಮಿನಕಟ್ಟಿ ಶುಶ್ರೂಷಾಧಿಕಾರಿಗಳು ಜಿಲ್ಲಾ ಆಸ್ಪತ್ರೆ, ಬೆಳಗಾವಿ | ಚಿಕಿತ್ಸೆ ಕುರಿತು ಸರಿಯಾದ ಮಾರ್ಗದರ್ಶ ನೀಡದೇ ಶಿಶುಮರಣ ಸಂಭವಿಸುವ ಮೂಲಕ ಕರ್ತವ್ಯನಿರ್ಲಕ್ಷ್ಯತೆ/ಕರ್ತವ್ಯಲೋಪದ ಆರೋಪ. | ಪ್ರಸ್ತಾವನೆ ಸ್ವೀಕರಿಸಿದ್ದು, ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತಿದೆ. |
| 3 | ಶ್ರೀಮತಿ.ಕಮಲ, ಶುಶ್ರೂಷಾಧಿಕಾರಿ. ಜಿಮ್ಸ್ ಆಸ್ಪತ್ರೆ, ಕಲಬುರಗಿ | ಕರ್ತವ್ಯ ನಿರ್ಲಕ್ಷ್ಯತೆಯಿಂದ ಮಗು ಕಳವಾಗಿರುವ ಬಗ್ಗೆ. | ಸದರಿ ನೌಕರರನ್ನು ಸೇವೆಯಿಂದ ಅಮಾನತ್ತುಗೊಳಿಸಲಾಗಿದ. |
| 4 | ಶ್ರೀಮತಿ.ಸುಭದ್ರಾ, ಶುಶ್ರೂಷಾಧಿಕಾರಿ, ತಾಲ್ಲೂಖು ಆಸ್ಪತ್ರೆ ಮುದ್ದೇಬಿಹಾಳ ಸಾ: ಮಲಘಾಣ ಮಸೂತಿ ತಾಲ್ಲೂಕು, ಕೋಲಾರ ಜಿಲ್ಲೆ. | ವೈದ್ಯರೆಂದು ಜನರನ್ನು ನಂಬಿಸಿ ಗರ್ಭಪಾತ ಮಾತ್ರೆಗಳನ್ನು ಮತ್ತು ಔಷಧಿಗಳನ್ನು ನೀಡುತ್ತಿರುವ ಬಗ್ಗೆ. | ಸದರಿ ನೌಕರರನ್ನು ಅಭಿಯೋಜನೆಗೆ ಒಳಪಡಿಸಲು ಕಡತವು ಚಾಲನೆಯಲ್ಲಿರುತ್ತದೆ. |